**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ**

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105

**VIJAYANAGARA SRI KRISHNADEVARAYA UNIVERSITY**

"Jnana Sagara" Campus, Vinayaka Nagara, Cantonment, Ballari - 583 105

**ನಿಲಯಪಾಲಕರು**


ಕ್ರ.ಸಂ.ವಿಶ್ರೀಕೃವಿಬ/ವಿವನಿ/ಪ್ರಅ/2026–27/ ದಿನಾಂಕ:

## ಅಧಿಸೂಚನೆ

ಈ ಅಧಿಸೂಚನೆ ಮೂಲಕ 2026–27ನೇ ಸಾಲಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಸಾಮಾನ್ಯ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಪ್ರವೇಶ ಕೋರಿ ಆಯ್ಕೆಯಾದ ಪ್ರಥಮ ಸೆಮಿಸ್ಟರ್‌ನ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಪ್ರವೇಶ ಪಡೆಯಲು ಸೂಚಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾಲಯದ ಆದೇಶಾನುಸಾರ ಪ್ರಥಮ ವರ್ಷದ ಪ.ಜಾ–ಪ.ಪಂ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪ್ರವೇಶ ಶುಲ್ಕ **ರೂ. 2,123/–**ಗಳನ್ನು ಮತ್ತು ಪ್ರಥಮ ಸಾಮಾನ್ಯ ಹಾಗೂ ಹಿಂದುಳಿದ ವರ್ಗಗಳ ಪ್ರವೇಶ ಶುಲ್ಕ **ರೂ.7,535/–**ಗಳನ್ನು ವಿಶ್ವವಿದ್ಯಾಲಯದ ಖಾತೆ ಸಂಖ್ಯೆ : **3866101000001 (ಹಳದಿ ಚಲನ್)** ಗೆ ಮತ್ತು ಮೆಸ್ ಮುಂಗಡ ಹಣ **ರೂ.4,000/–** **(ವೈಟ್ ಚಲನ್)** ಗಳನ್ನು ಖಾತೆ ಸಂಖ್ಯೆ:**110180576526**ಗೆ ಪಾವತಿಸಿ **ದಿನಾಂಕ: 10–09–2026** ರೊಳಗಾಗಿ ಪ್ರವೇಶ ಪಡೆಯಲು ಸೂಚಿಸಲಾಗಿದೆ. ಕೊನೆಯ ದಿನಾಂಕದ ನಂತರ ಪ್ರವೇಶ ಪಡೆಯಲು ಅವಕಾಶವಿರುವುದಿಲ್ಲ.

**ವಿಶೇಷ ಸೂಚನೆ:–** ವಿದ್ಯಾರ್ಥಿನಿಯರ ವಸತಿ ನಿಲಯದ ಪ್ರವೇಶಕ್ಕೆ ಬರುವಾಗ **ರೂ.100/–** ಗಳ ಒಂದು ಬಾಂಡ್‌ನ್ನು ಕಡ್ಡಾಯವಾಗಿ ತರಲು ಈ ಮೂಲಕ ಸೂಚಿಸಲಾಗಿದೆ.

24/8/26

ಮುಖ್ಯ ನಿಲಯಪಾಲಕರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ

CHIEF WARDEN
Vijayanagara Sri Krishnadevaraya University
Jnanasagara Campus, Ballari-583105.

ಗೆ,
ವಸತಿ ನಿಲಯಕ್ಕೆ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿನಿಯರುಗಳಿಗೆ.

ಪ್ರತಿ :

1. ಹಣಕಾಸು ಅಧಿಕಾರಿಗಳು, ವಿಶ್ರೀಕೃವಿವಿ ಬಳ್ಳಾರಿ.
2. ಕಛೇರಿ ಪ್ರತಿ

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105

**VIJAYANAGARA SRI KRISHNADEVARAYA UNIVERSITY**

"Jnana Sagara" Campus, Vinayaka Nagara, Cantonment, Ballari - 583 105

ಮುಖ್ಯ ನಿಲಯಪಾಲಕರು

ಕ್ರ.ಸಂ.ವಿಶ್ರೀಕೃವಿಬ/ವಿವನಿ/ಪ್ರಅ/2026–27/ ದಿನಾಂಕ:

# ಸೂಚನೆ

ಈ ಅಧಿಸೂಚನೆ ಮೂಲಕ 2026–27ನೇ ಸಾಲಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಪಜಾ/ಪ.ಪಂ ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಮತ್ತು ಸಾಮಾನ್ಯ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಪ್ರವೇಶ ಕೋರಿ ಆಯ್ಕೆಯಾದ ದ್ವಿತೀಯ ವರ್ಷದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿ ನಿಲಯಕ್ಕೆ ಪ್ರವೇಶ ಪಡೆಯಲು ಸೂಚಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾಲಯದ ಆದೇಶಾನುಸಾರ ದ್ವಿತೀಯ ವರ್ಷದ ಪ.ಜಾ–ಪ.ಪಂ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪ್ರವೇಶ ಶುಲ್ಕ **ರೂ. 150/–** ಗಳನ್ನು ಮತ್ತು ದ್ವಿತೀಯ ವರ್ಷದ ಸಾಮಾನ್ಯ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ಪ್ರವೇಶ ಶುಲ್ಕ **ರೂ. 4264/–** ಗಳನ್ನು ವಿಶ್ವವಿದ್ಯಾಲಯದ ಖಾತೆ ಸಂಖ್ಯೆ: **3866101000001** ಗೆ ಪಾವತಿಸಿ **ದಿನಾಂಕ: 31–08–2026** ರೊಳಗಾಗಿ ಪ್ರವೇಶ ಪಡೆಯಲು ಸೂಚಿಸಲಾಗಿದೆ. ಕೊನೆಯ ದಿನಾಂಕದ ನಂತರ ಪ್ರವೇಶ ಪಡೆಯಲು ಅವಕಾಶವಿರುವುದಿಲ್ಲ.

**ವಿಶೇಷ ಸೂಚನೆ:–** ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಸತಿ ನಿಲಯದ ಪ್ರವೇಶಕ್ಕೆ ಬರುವಾಗ ರೂ.100/– ಗಳ ಒಂದು ಬಾಂಡ್‌ನ್ನು ಕಡ್ಡಾಯವಾಗಿ ತರಲು ಈ ಮೂಲಕ ಸೂಚಿಸಲಾಗಿದೆ.

24/8/26

ಮುಖ್ಯ ನಿಲಯಪಾಲಕರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ

CHIEF WARDEN
Vijayanagara Sri Krishnadevaraya University
Jnanasagara Campus, Ballari-583105.

ಗೆ,
ವಸತಿ ನಿಲಯಕ್ಕೆ ಆಯ್ಕೆಯಾದ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ.

ಪ್ರತಿ :

1. ಹಣಕಾಸು ಅಧಿಕಾರಿಗಳು, ವಿಶ್ರೀಕೃವಿವಿ ಬಳ್ಳಾರಿ.
2. ಕಛೇರಿ ಪ್ರತಿ

## ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

## ವಸತಿ ನಿಲಯ ಪ್ರವೇಶಕ್ಕೆ ಸಂಬಂಧಿಸಿದ ಹಾಮಿಪತ್ರ

## UNDERTAKING BOND

**ಶೈಕ್ಷಣಿಕ ವರ್ಷ: 2026–27**

**ವಸತಿ ನಿಲಯದ ಪ್ರಕಾರ:**

ಬಾಲಕರ ವಸತಿ ನಿಲಯ (Boys' Hostel) /ಬಾಲಕಿಯರ ವಸತಿ ನಿಲಯ (Girls' Hostel)

ನಾನು ವಿದ್ಯಾರ್ಥಿ/ವಿದ್ಯಾರ್ಥಿನಿ ಶ್ರೀ/ಶ್ರೀಮತಿ ___________________________, ತಂದೆ/ತಾಯಿ/ಪೋಷಕರ ಹೆಸರು ___________________________, ವಿಭಾಗ _________________, ವರ್ಷ/ಸೆಮಿಸ್ಟರ್ __________, ಪ್ರವೇಶ ಸಂಖ್ಯೆ __________, ವಿಶ್ವವಿದ್ಯಾಲಯದ _________________________ ವಸತಿ ನಿಲಯದಲ್ಲಿ ಪ್ರವೇಶ ಪಡೆದಿರುತ್ತೇನೆ.

ವಸತಿ ನಿಲಯದ ನಿಯಮಗಳು ಹಾಗೂ ಷರತ್ತುಗಳನ್ನು ಓದಿ, ಅರ್ಥಮಾಡಿಕೊಂಡು, ಕೆಳಕಂಡ ನಿಯಮಗಳನ್ನು ಪಾಲಿಸುವುದಾಗಿ ಈ ಮೂಲಕ ಹಾಮಿ ನೀಡುತ್ತೇನೆ.

**1. ಮಾದಕ ವಸ್ತುಗಳು, ಧೂಮಪಾನ ಮತ್ತು ನಿಷೇಧಿತ ಚಟುವಟಿಕೆಗಳು**

ವಸತಿ ನಿಲಯದಲ್ಲಿ ಯಾವುದೇ ಮಾದಕ ವಸ್ತುಗಳನ್ನು ಬಳಸುವುದಿಲ್ಲ ಹಾಗೂ ವಸತಿ ನಿಲಯದ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ.

**2. ಅಪಾಯಕಾರಿ ಸ್ಥಳಗಳಿಗೆ ಪ್ರವೇಶ**

ವಿಶ್ವವಿದ್ಯಾಲಯದ ಆವರಣದಲ್ಲಿರುವ ಕಾಲುವೆ/ಅಪಾಯಕಾರಿ ಸ್ಥಳಗಳಿಗೆ ಹೋಗುವುದಿಲ್ಲ. ಅಂತಹ ಸ್ಥಳಗಳಲ್ಲಿ ಯಾವುದೇ ಅಪಾಯ ಸಂಭವಿಸಿದಲ್ಲಿ ವಸತಿ ನಿಲಯ ಪಾಲಕರು ಅಥವಾ ವಿಶ್ವವಿದ್ಯಾಲಯ ಜವಾಬ್ದಾರರಾಗಿರುವುದಿಲ್ಲ.

**3. ಊಟ ಮತ್ತು ಉಪಹಾರದ ಗುಣಮಟ್ಟ**

ಊಟ ಮತ್ತು ಉಪಹಾರದ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ವಸತಿ ನಿಲಯ ಪಾಲಕರ ಗಮನಕ್ಕೆ ತರುತ್ತೇನೆ. ಅಡುಗೆ ಸಿಬ್ಬಂದಿ ಅಥವಾ ಗುತ್ತಿಗೆದಾರರೊಂದಿಗೆ ನೇರವಾಗಿ ವಾದಿಸುವುದಿಲ್ಲ.

**4. ಗುಂಪು ಪ್ರತಿಭಟನೆ ಮತ್ತು ಅಶಿಸ್ತು**

ವಸತಿ ನಿಲಯದ ನಿಯಮಗಳನ್ನು ಉಲ್ಲಂಘಿಸಿ ಗುಂಪು ಸೇರಿ ಪ್ರತಿಭಟನೆ, ಗಲಾಟೆ ಅಥವಾ ಅಶಿಸ್ತು ನಡೆಸುವುದಿಲ್ಲ. ಅಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ.

**5. ಅತಿಥಿಗಳ ಪ್ರವೇಶ**

ವಸತಿ ನಿಲಯಕ್ಕೆ ಅತಿಥಿಗಳನ್ನು ಕರೆತರುವುದಿಲ್ಲ. ನಿಯಮಾನುಸಾರ ಅತಿಥಿಯನ್ನು ಕರೆತಂದಲ್ಲಿ, ಅದಕ್ಕೆ ಸಂಬಂಧಿಸಿದ ದಂಡ ಅಥವಾ ಇತರೆ ಕ್ರಮಕ್ಕೆ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ.

**6. ಊಟದ ಸೇವನೆ**

ವಸತಿ ನಿಲಯದಲ್ಲಿ ನೀಡಲಾಗುವ ಊಟವನ್ನು ನಿಗದಿತ ಊಟದ ಕೊಠಡಿಯಲ್ಲಿಯೇ ಸೇವಿಸುತ್ತೇನೆ. ಊಟವನ್ನು ಕೊಠಡಿಗೆ ತೆಗೆದುಕೊಂಡು ಹೋಗುವುದಿಲ್ಲ.

**7. ಅನಧಿಕೃತ ವಿದ್ಯುತ್ ಉಪಕರಣಗಳು**

ವಿದ್ಯುತ್ ಒಲೆ, ವಾಟರ್ ಹೀಟರ್, ಏರ್ ಕೂಲರ್ ಹಾಗೂ ಇತರೆ ಅನಧಿಕೃತ ವಿದ್ಯುತ್ ಉಪಕರಣಗಳನ್ನು ಬಳಸುವುದಿಲ್ಲ.

**8. ಕೊಠಡಿಯಲ್ಲಿ ಸ್ವಯಂ ಅಡುಗೆ ನಿಷೇಧ**

ವಸತಿ ನಿಲಯದ ಕೊಠಡಿಯಲ್ಲಿ ಯಾವುದೇ ರೀತಿಯ ಸ್ವಯಂ ಅಡುಗೆ ಮಾಡುವುದಿಲ್ಲ.

**9. ಸ್ವಚ್ಛತೆ ಮತ್ತು ವಿಶ್ವವಿದ್ಯಾಲಯದ ಆಸ್ತಿ ರಕ್ಷಣೆ**

ವಸತಿ ನಿಲಯದ ಕೊಠಡಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತೇನೆ. ಕೊಠಡಿಯ ಗೋಡೆಗಳಲ್ಲಿ ಯಾವುದೇ ರೀತಿಯ ಬರಹ ಬರೆಯುವುದಿಲ್ಲ ಹಾಗೂ ಹಾನಿ ಮಾಡುವುದಿಲ್ಲ. ನನ್ನಿಂದ ಯಾವುದೇ ಹಾನಿಯಾದಲ್ಲಿ ಅದನ್ನು ಸ್ವಚ್ಛಗೊಳಿಸುವ/ಸರಿಪಡಿಸುವ ಜವಾಬ್ದಾರಿ ನನ್ನದಾಗಿರುತ್ತದೆ.

**10. ಊಟ ಮತ್ತು ಉಪಹಾರದ ಸಮಯ**

ನಿಗದಿಪಡಿಸಿದ ಸಮಯದೊಳಗೆ ಊಟ ಮತ್ತು ಉಪಹಾರಕ್ಕೆ ಹಾಜರಾಗುತ್ತೇನೆ: ಉಪಹಾರ – ಬೆಳಿಗ್ಗೆ 09.00 ಗಂಟೆಯೊಳಗೆ; ಮಧ್ಯಾಹ್ನದ ಊಟ – ಮಧ್ಯಾಹ್ನ 03.00 ಗಂಟೆಯೊಳಗೆ; ರಾತ್ರಿ ಊಟ – ರಾತ್ರಿ 09.00 ಗಂಟೆಯೊಳಗೆ.

**11. ಪ್ರವೇಶ, ನಿರ್ಗಮನ ಮತ್ತು ಅನುಮತಿ**

ವಸತಿ ನಿಲಯಕ್ಕೆ ನಿಗದಿಪಡಿಸಿದ ಸಮಯದೊಳಗೆ ಹಿಂತಿರುಗುತ್ತೇನೆ. ಹೊರಗೆ ಹೋಗಬೇಕಾದ ಸಂದರ್ಭದಲ್ಲಿ ವಸತಿ ನಿಲಯ ಪಾಲಕರ ಪೂರ್ವಾನುಮತಿ ಪಡೆದು, ನಿರ್ಗಮನ ನೋಂದಣಿ (Exit Register) ಯಲ್ಲಿ ನಮೂದಿಸಿ ತೆರಳುತ್ತೇನೆ.

**12. ವಸತಿ ನಿಲಯವನ್ನು ಶಾಶ್ವತವಾಗಿ ತೊರೆಯುವುದು**

ವಸತಿ ನಿಲಯವನ್ನು ಶಾಶ್ವತವಾಗಿ ತೊರೆಯುವ ಸಂದರ್ಭದಲ್ಲಿ ವಸತಿ ನಿಲಯದ ಮುಖ್ಯಸ್ಥರಿಗೆ ಲಿಖಿತವಾಗಿ ತಿಳಿಸುತ್ತೇನೆ. ವಸತಿ ನಿಲಯದಿಂದ ಪಡೆದಿರುವ ಯಾವುದೇ ವಸ್ತುಗಳನ್ನು ಉತ್ತಮ ಸ್ಥಿತಿಯಲ್ಲಿ ಹಿಂತಿರುಗಿಸುತ್ತೇನೆ. ಹಾನಿ/ನಷ್ಟವಾದಲ್ಲಿ ನಿಯಮಾನುಸಾರ ಮೊತ್ತವನ್ನು ಪಾವತಿಸುತ್ತೇನೆ.

**13. ವಿದ್ಯಾರ್ಥಿವೇತನ/ಸರ್ಕಾರಿ ಸೌಲಭ್ಯಗಳ ಮಾಹಿತಿ**

ವಿದ್ಯಾರ್ಥಿವೇತನ/ಸರ್ಕಾರಿ ಸೌಲಭ್ಯಕ್ಕೆ ಸಂಬಂಧಿಸಿದ ಅರ್ಜಿಯಲ್ಲಿ ನಾನು ಸಲ್ಲಿಸುವ ಎಲ್ಲಾ ಮಾಹಿತಿ ಹಾಗೂ ದಾಖಲೆಗಳು ಸತ್ಯ ಮತ್ತು ಸರಿಯಾಗಿರುತ್ತವೆ. ತಪ್ಪು ಅಥವಾ ಸುಳ್ಳು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಕೈಗೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ.

**14. ವಿದ್ಯಾರ್ಥಿವೇತನ/ಸೌಲಭ್ಯಗಳ ಮರುಪಾವತಿ**

ವಿದ್ಯಾರ್ಥಿವೇತನ ಅಥವಾ ಇತರೆ ಸೌಲಭ್ಯಗಳನ್ನು ಪಡೆದ ನಂತರ, ನಿಯಮಾನುಸಾರ ಮೊತ್ತವನ್ನು ಹಿಂತಿರುಗಿಸಬೇಕಾದ ಪರಿಸ್ಥಿತಿ ಉಂಟಾದಲ್ಲಿ, ಸಂಬಂಧಪಟ್ಟ ಮೊತ್ತವನ್ನು ಹಿಂತಿರುಗಿಸುವ ಸಂಪೂರ್ಣ ಜವಾಬ್ದಾರಿ ನನ್ನದಾಗಿರುತ್ತದೆ.

**15. ವಸತಿ ನಿಲಯದಲ್ಲಿ ನಿಯಮಿತ ವಾಸ**

ವಸತಿ ನಿಲಯಕ್ಕೆ ಪ್ರವೇಶ ಪಡೆದ ನಂತರ ನಾನು ನಿಯಮಿತವಾಗಿ ವಸತಿ ನಿಲಯದಲ್ಲಿ ವಾಸಿಸುತ್ತೇನೆ. ನಿರಂತರವಾಗಿ ಗೈರುಹಾಜರಾಗಿದ್ದಲ್ಲಿ, ನಿಯಮಾನುಸಾರ ನನ್ನ ಪ್ರವೇಶವನ್ನು ರದ್ದುಗೊಳಿಸಬಹುದೆಂಬುದನ್ನು ತಿಳಿದಿರುತ್ತೇನೆ.

**16. ವಿಶ್ವವಿದ್ಯಾಲಯದ ನಿಯಮಗಳ ಪಾಲನೆ**

ವಸತಿ ನಿಲಯ ಹಾಗೂ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಜಾರಿಗೊಳಿಸುವ ಎಲ್ಲಾ ನಿಯಮಗಳು, ಷರತ್ತುಗಳು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುತ್ತೇನೆ.

**ಅಂತಿಮ ಘೋಷಣೆ**

ಮೇಲ್ಕಂಡ ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ನಾನು ಓದಿ, ಅರ್ಥಮಾಡಿಕೊಂಡಿದ್ದು, ಅವುಗಳಿಗೆ ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ. ಯಾವುದೇ ನಿಯಮ ಅಥವಾ ಷರತ್ತಿನ ಉಲ್ಲಂಘನೆಯಾದಲ್ಲಿ ವಿಶ್ವವಿದ್ಯಾಲಯ/ವಸತಿ ನಿಲಯ ಆಡಳಿತವು ನಿಯಮಾನುಸಾರ ಕೈಗೊಳ್ಳುವ ಕ್ರಮಕ್ಕೆ ನಾನು ಹೊಣೆಗಾರನಾಗಿರುತ್ತೇನೆ/ಹೊಣೆಗಾರಳಾಗಿರುತ್ತೇನೆ.

**ವಿದ್ಯಾರ್ಥಿ/ವಿದ್ಯಾರ್ಥಿನಿಯ ವಿವರ**

ಹೆಸರು :

ಪ್ರವೇಶ ಸಂಖ್ಯೆ :

ವಿಭಾಗ :

ವರ್ಷ/ಸೆಮಿಸ್ಟರ್ :

ವಸತಿ ನಿಲಯದ ಹೆಸರು :

ಮೊಬೈಲ್ ಸಂಖ್ಯೆ :

ವಿದ್ಯಾರ್ಥಿ/ವಿದ್ಯಾರ್ಥಿನಿಯ ಸಹಿ: ____________________________

**ತಂದೆ/ತಾಯಿ/ಪೋಷಕರ ಘೋಷಣೆ**

ಮೇಲ್ಕಂಡ ಹಾಮಿಪತ್ರದಲ್ಲಿರುವ ನಿಯಮಗಳು ಮತ್ತು ಷರತ್ತುಗಳನ್ನು ಓದಿ, ಅರ್ಥಮಾಡಿಕೊಂಡಿದ್ದು, ನನ್ನ ಮಗ/ಮಗಳು/ಪಾಲ್ಯರು ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳುತ್ತೇನೆ. ನಿಯಮ ಉಲ್ಲಂಘನೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಕೈಗೊಳ್ಳುವ ಕ್ರಮಕ್ಕೆ ನನ್ನ ಒಪ್ಪಿಗೆ ಇರುತ್ತದೆ.

ತಂದೆ/ತಾಯಿ/ಪೋಷಕರ ಹೆಸರು :

ಮೊಬೈಲ್ ಸಂಖ್ಯೆ :

ಸಹಿ :

ವಸತಿ ನಿಲಯ ಪಾಲಕರ ಸಹಿ

ವಸತಿ ನಿಲಯದ ಮುಖ್ಯಸ್ಥರು/ಅಧೀಕ್ಷಕರ ಸಹಿ

ದಿನಾಂಕ: ____________________

## Admission Time – Important Instructions

Students seeking admission to the Hostel for the academic year **2026–27** are required to bring the following at the time of admission:

1. **₹100/- (Rupees One Hundred only)** towards the **Hostel Undertaking Bond**.
2. The **Hostel Undertaking Bond**, duly printed and **signed by both the student and the Parent/Guardian**, must be submitted at the time of admission.
3. Students must bring the **original Bank Challan / Admission Fee Paid Challan Receipt** issued by **Canara Bank, VSK University, Ballari**, as proof of payment.
   - **Yellow Colour Challan:** Admission Fee Challan for **SC/ST/OBC students**.
   - **White Colour Challan: ₹4,000/- (Rupees Four Thousand only) Advance Amount – applicable only to OBC students.**
4. Students should ensure that **all required documents** are submitted at the time of hostel admission.

**Note:** Hostel admission will be processed only after verification of the required documents and the **original fee-payment challan/receipt**.